9. ಗಮನ ಸೆಳೆಯುವ ಸೂಚನೆಗಳು :

ವಿಷಯ : ಕುಮಟಾ ಮತ ಕ್ಷೇತ್ರದಲ್ಲಿ ಹಿಂದೂಗಳ ಶವ ಸಂಸ್ಕಾರಕ್ಕೆ ಕಟ್ಟಿಗೆ ಅಭಾವವಿರುವ ಬಗ್ಗೆ.

ಶ್ರೀ ದಿನಕರ ಶೆಟ್ಟಿ(ಕುಮಟಾ) : ಮಾನ್ಯ ಅಧ್ಯಕ್ಷರೆ, ಕುಮಟಾ ಮತ ಕ್ಷೇತ್ರದಲ್ಲಿ ಹಿಂದುಗಳ ಶವ ಸಂಸ್ಕಾರಕ್ಕೆ ಕಟ್ಟಿಗೆಯ ಅಭಾವವಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಗ್ರಾಮೀಣಾಭಿವೃದ್ಧಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸದಸ್ಯರಾದ ಶ್ರೀ ದಿನಕರ ಕೇಶವ ಶೆಟ್ಟಿಯವರು ನಿಯಮ 73 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ಕೊಡಬಯಸುತ್ತೇನೆ. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿ ಒಟ್ಟು 16 ಉರುವಲು ಕಟ್ಟಿಗೆ ಡಿಪೋಗಳಿರುತ್ತವೆ. ಈ ಪೈಕಿ ಆಡಳಿತಾತ್ಮಕ ಕಾರಣಗಳಿಂದ 6 ಡಿಪೋಗಳನ್ನು ತಾತ್ಕಾಲಿಕವಾಗಿ ಡಿಸೆಂಬರ್ 2009ರ ಅಂತ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಸದರಿ ಡಿಪೋಗಳಿಂದ ಉರುವಲು ಕಟ್ಟಿಗೆಯನ್ನು ಖರೀದಿ ಮಾಡುತ್ತಿದ್ದ ಜನರಿಗೆ ಅಂದಾಜು 3 ಕಿ.ಮೀ. ವ್ಯಾಪ್ತಿಯಲ್ಲಿರುವ ಇತರ ಡಿಪೋಗಳಿಂದ ಮಾರಾಟ ಮಾಡಲಾಗುತ್ತಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಪರಿಗಣಿಸಿ ಮುಚ್ಚಲಾಗಿದ್ದ 6 ಡಿಪೋಗಳಲ್ಲಿ 2 ಡಿಪೋಗಳನ್ನು (ಕುಮಟಾ – 3 ಡಿಪೋ ಮತ್ತು ತದಡಿ ಡಿಪೋ) ಪುನಃ ಫೆಬ್ರವರಿ 2010 ರಿಂದ ಪುನರಾರಂಭಿಸಲಾಗಿದೆ. ಉಳಿದ ಉರುವಲು ಕಟ್ಟಿಗೆ ಡಿಪೋಗಳನ್ನು ಅಗತ್ಯತೆಗನುಗುಣವಾಗಿ ಪುನಃ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಕುಮಟಾ ತಾಲ್ಲೂಕಿನ ಉರುವಲು ಕಟ್ಟಿಗೆ ಡಿಪೋಗಳಲ್ಲಿ ಈಗ ದಾಸ್ತಾನು ಕಡಿಮೆ ಇದ್ದು, ಕಟಾವು ಮಾಡಿದ ನೆಡುತೋಪುಗಳಿಂದ ಉರುವಲು ಕಟ್ಟಿಗೆಯನ್ನು ಸಾಗಾಣಿಕೆ ಮಾಡಲು ತುರ್ತು ಕ್ರಮ ಕೈಗೊಳ್ಳಲಾಗಿದೆ.

ಕುಮಟಾ ತಾಲ್ಲೂಕಿನಲ್ಲಿ ಹಿಂದೂಗಳ ಶವ ಸಂಸ್ಕಾರಕ್ಕೆ ತೊಂದರೆಯಾಗದಂತೆ ಉರುವಲು ಕಟ್ಟಿಗೆಯನ್ನು ಪೂರೈಸುವ ವ್ಯವಸ್ಥೆ ಮಾಡಲಾಗುವುದು.

(6 – 10 P.M.)

ಶ್ರೀ ದಿನಕರ ಕೇಶವ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ನಮ್ಮ ಕ್ಷೇತ್ರದಲ್ಲಿ 80% ಅರಣ್ಯ ಪ್ರದೇಶ ಹೊಂದಿದ್ದು, ಹಿಂದೂಗಳ ಶವ ಸಂಸ್ಕಾರಕ್ಕೆ ಇರಬಹುದು, ಬಡವರು ಅಡಿಗೆಯನ್ನು ಮಾಡುವುದಕ್ಕೋಸ್ಕರ ಉರುವಲು ಕಟ್ಟಿಗೆಯ ಅವಶ್ಯಕತೆ ತೀರ ಇರುವುದರಿಂದ, ಹೊನ್ನಾವರ ತಾಲ್ಲೂಕಿನಲ್ಲಿ ಆದಷ್ಟು ಬೇಗ ಎರಡು ಡಿಪೋಗಳನ್ನು ತೆರೆಯವುದರ ಬಗ್ಗೆ ನಾನು ಡಿಸಿಯವರಿಗೆ ಕಳೆದ ವರ್ಷ ವಿನಂತಿಯನ್ನು ಮಾಡಿದ್ದೆನು. ಆದರೆ ಇಲ್ಲಿಯವರೆಗೂ ಒಂದೇ ಡಿಪೋ ಪ್ರಾರಂಭವಾಗಿರುತ್ತದೆ. ಈಗ ಪ್ರಾರಂಭ ಮಾಡಿರುವಂತಹ ಆ ಒಂದು ಡಿಪೋದಲ್ಲಿ ಕೂಡ ಕಟ್ಟಿಗೆಯ ಅಭಾವ ವಿರುತ್ತದೆ. ಅದೇ ರೀತಿ ಕುಮಟಾ ತಾಲ್ಲೂಕಿನಲ್ಲಿ ಸಹ ಪ್ರಾರಂಭವಾಗಿದ್ದಂತಹ ನಾಲ್ಕು ಡಿಪೋಗಳನ್ನು ಸಹ ಬಂದ್ ಮಾಡಿದ್ದಾರೆ. ಅವುಗಳನ್ನು ಕೂಡಲೇ ಪ್ರಾರಂಭ ಮಾಡಬೇಕು. ಕೇವಲ ಡಿಪೋವನ್ನು ತೆರೆದರೆ ಆಗುವುದಿಲ್ಲ, ಅಲ್ಲಿ ಕಟ್ಟಿಗೆಯನ್ನು ಸಂಪೂರ್ಣವಾಗಿ ಕಾಲಕಾಲಕ್ಕೆ ಪೂರೈಸುವಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಸೂಚನೆಯನ್ನು ನೀಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೇಟ್ಟರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಆರು ಡಿಪೋಗಳಲ್ಲಿ ಎರಡು ಡಿಪೋಗಳನ್ನು ಫೆಬ್ರವರಿ 2010ಕ್ಕೆ ಪ್ರಾರಂಭ ಮಾಡಿದ್ದೇವೆ. ಇನ್ನು ನಾಲ್ಕು ಡಿಪೋಗಳನ್ನು ಕೂಡ ಅಗತ್ಯತೆಗೆ ಅನುಗುಣವಾಗಿ ಏನೇನು ಅವಶ್ಯಕತೆ ಇದೆ ಎನ್ನುವುದನ್ನು ನೋಡಿ ಅದನ್ನೂ ಪ್ರಾರಂಭ ಮಾಡುತ್ತೇವೆ. ಹೀಗಾಗಿ ಕುಮಟಾ ತಾಲ್ಲೂಕಿನಲ್ಲಿ ಉರುವಲು ಕಟ್ಟಿಗೆ ದಾಸ್ತಾನು ಕಡಿಮೆಯಿದ್ದು, ದಾಸ್ತಾನನ್ನು ಹೆಚ್ಚು ಮಾಡುವುದಕ್ಕೆ ಮತ್ತು ಉರುವಲು ಕಟ್ಟಿಗೆಯನ್ನು ಸಾಗಾಣಿಕೆ ಮಾಡುವುದಕ್ಕೆ ತುರ್ತು ಕ್ರಮವನ್ನು ಕೈಗೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಶವ ಸಂಸ್ಕಾರಕ್ಕೆ ಮತ್ತು ಇನ್ನಿತರ ಕೆಲಸಕಾರ್ಯಗಳಿಗೆ ಉರುವಲು ಕಟ್ಟಿಗೆ ತೊಂದರೆಯಾಗದ ರೀತಿಯಲ್ಲಿ ಅದನ್ನು ಕಾಯ್ದುಕೊಂಡು ಹೋಗುತ್ತೇವೆ.